



## ಬದಲಾದ ಸೂರ್ಯ; ಮನೆ ನಂದನವನ

‘ಸೂರ್ಯ... ನೀನು ಒಳಗೆ ಹೋಗಬಹುದು.. ಇವತ್ತು, ಡಾಕ್ಟ್ರಿಗೆ ಸೂರ್ಯನ ಬಳಿ ಮಾತ್ರ ಸಂದರ್ಶನ..’ ಸೂರ್ಯ ಅಪೂರ್ವಳತ್ತ ತಿರುಗಿ ನೋಡಿದಾಗ, ಅವಳು ಕಂಗಳಲ್ಲೇ ಧೈರ್ಯ ತುಂಬುವಂತೆ ಸಂಜ್ಞೆ ಮಾಡಿದಳು. ಅವನು ಒಳಹೊಕ್ಕಾಗ ಆದರ್ಶ ಹೊರಗೆ, ಅಪೂರ್ವಳ ಬಳಿ ಇದ್ದ ಖಾಲಿ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ,

‘ಆ ಉಗ್ರ ಪ್ರತಾಪಿ ಸೂರ್ಯ ಇವನೇನಾ ಅಂತ ಅನಿಸ್ತಾ ಇದೆ.. ಇವ್ನು ಹೇಗೆ ಇಷ್ಟೊಂದು ಮೃದುವಾದ..? ಏನಾಗಿದೆ ಇವ್ನಿಗೆ?’

‘ಮಗುವಿಗೆ ಏನಾದ್ರೂ ಬೇಕು ಅನಿಸಿದ್ರೆ ಸಿಗದಾಗ ರಚ್ಚೆ ಹಿಡಿಯುತ್ತೆ.. ಸಿಕ್ಕಿದ ಮೇಲೆ ಸೌಮ್ಯವಾಗುತ್ತೆ.. ಸೂರ್ಯನ ಸ್ಥಿತಿಯೂ ಹಾಗೇ ಆಗಿದೆ.. ಅದಿರಲಿ.. ಡಾಕ್ಟ್ರ ಹತ್ರ ಸೂರ್ಯನನ್ನು ಕಳಿಸುವ ಮುನ್ನ ಇವ್ರ ವಿಷಯ ಅವ್ರಿಗೆ ತಿಳಿಸಬೇಕಿತ್ತು ತಾನೆ? ಅವ್ರೀಗ ಏನೇನು ಪ್ರಶ್ನೆ ಕೇಳ್ತಿದ್ದಾರೋ.. ಇವ್ರು ಸಿಟ್ಟು ಮಾಡಿಕೊಂಡು ಅವ್ರಿಗೆ ಎರಡು ಬಿಗಿದು ಬರದಿದ್ದರೆ ಸಾಕು..’ ಹೊರಗೆ ಕುಳಿತ

ವಿಜಯಕುಮಾರಿ